# ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

(ಕರ್ನಾಟಕ ಸರ್ಕಾರದ ಸಂಸ್ಥೆ)

"ಖಾದಿ ಭವನ", ನಂ. 10, ಜಸ್ಮಾಭವನ ರಸ್ತೆ, ಬೆಂಗಳೂರು-560 052.

ಕಛೇರಿ : 080-2226 6852, 080-4853 8468 ಇ-ಮೇಲ್ : kviboardbangkar@gmail.com

## ನಿಬಂಧನೆಗಳು:-

1. ಮಳಿಗೆ ಪಡೆದ ಸಂಘ/ಸಂಸ್ಥೆಗಳು ಅಥವಾ ಉದ್ದಿಮೆದಾರರು ಯಾವುದೇ ಕಾರಣಕ್ಕೂ ಬೇರೆಯವರಿಗೆ ಒಳಬಾಡಿಗೆ ಕೊಡುವಂತಿಲ್ಲ.
2. ಬೆಂಕಿ ಅನಾಹುತಕ್ಕೆ ಕಾರಣವಾಗುವ ಧೂಮಪಾನ, ಸ್ಟವ್(ಕೆರೋಸಿನ್/ಎಲೆಕ್ಟ್ರಿಕ್) ಬಳಕೆ, ಅಗರಬತ್ತಿ ಅಥವಾ ದೀಪ ಹಚ್ಚುವಿಕೆ ಇತ್ಯಾದಿ ಚಟುವಟಿಕೆಗಳನ್ನು ಕಡ್ಡಾಯವಾಗಿ ನಿಷೇಧಿಸಿದೆ.
3. ಮಧ್ಯಪಾನ ಮಾಡುವುದು, ಇಸ್ಪೀಟ್/ಜೂಜಾಡುವಿಕೆ ಹಾಗೂ ಇತರೇ ಕಾನೂನುಬಾಹಿರ ಚಟುವಟಿಕೆಗಳನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.
4. ಆನ್‌ಲೈನ್ ಮೂಲಕ ನೋಂದಣಿ ಮಾಡುವವರು ಕಡ್ಡಾಯವಾಗಿ ಪ್ರತಿ ಮಳಿಗೆಗೆ ರೂ.500/- (ಐದು ನೂರು ಮಾತ್ರ) ಅರ್ಜಿ ಶುಲ್ಕ ಹಾಗೂ ಮಳಿಗೆಯೊಂದರ ಬಾಡಿಗೆ ರೂ.35,400/- (ಜಿಎಸ್‌ಟಿ ಸೇರಿ) ಪ್ರತಿ ಮಳಿಗೆಗೆ ಪಾವತಿಸುವುದು.
5. ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳು ವಸ್ತುಪ್ರದರ್ಶನದಲ್ಲಿ ಬಳಸುವಂತಿಲ್ಲ.
6. ಯಾವುದೇ ಚಟುವಟಿಕೆಗಳು ಬಿಬಿಎಂಪಿ ಅಥವಾ ಕೇಂದ್ರ/ರಾಜ್ಯ ಸರ್ಕಾರದ ಚಾಲ್ತಿಯಲ್ಲಿರುವ ಕಾಯ್ದೆ/ನಿಯಮ/ಸುತ್ತೋಲೆ/ಆದೇಶಗಳಿಗೆ ಒಳಪಟ್ಟಿರುತ್ತದೆ.
7. ವಸ್ತು ಪ್ರದರ್ಶನದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು, ನಿಯಮಗಳನ್ನು ಉಲ್ಲಂಘಿಸಿದವರನ್ನು ಕೂಡಲೇ ವಸ್ತು ಪ್ರದರ್ಶನದಿಂದ ತೆರವುಗೊಳಿಸಲಾಗುವುದು ಹಾಗೂ ಕಟ್ಟಿರುವ ಬಾಡಿಗೆ ಹಣವನ್ನು ಸಂಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಮುಂದಿನ ಒಂದು ವರ್ಷ ಸರ್ಕಾರದ ಯಾವುದೇ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದು.
8. ಮಾರಾಟಕ್ಕೆ ಸಂಬಂಧಪಟ್ಟಂತೆ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ಪಾವತಿ ವ್ಯವಸ್ಥೆಯನ್ನು ಆಯಾ ಸಂಬಂಧಪಟ್ಟ ಮಳಿಗೆಯವರೇ ಮಾಡಿಕೊಳ್ಳತಕ್ಕದ್ದು, ಮಂಡಳಿಯಿಂದ ಯಾವುದೇ ವ್ಯವಸ್ಥೆ ಇರುವುದಿಲ್ಲ.
9. ದಿನದ ಮಾರಾಟವಾದ ಎಲ್ಲಾ ವಿವರಗಳನ್ನು ಮುಂದಿನ ದಿನ ಬೆಳಿಗ್ಗೆ 10 ಗಂಟೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಿಗದಿಪಡಿಸಿದ ನಮೂನೆಯಲ್ಲಿ ಸಲ್ಲಿಸಬೇಕು.
10. ಮಳಿಗೆಗಳಲ್ಲಿ ಹೆಚ್ಚುವರಿಯಾಗಿ ಲೈಟ್, ಟೇಬಲ್‌ಗಳ ಅವಶ್ಯಕತೆಯಿದ್ದಲ್ಲಿ ಪ್ರತ್ಯೇಕವಾಗಿ ಹಣ ಪಾವತಿಸಬೇಕಾಗುವುದು.
11. ದಾಸ್ತಾನು ವ್ಯವಸ್ಥೆ ಮತ್ತು ವಾಸ್ತವ್ಯ ವ್ಯವಸ್ಥೆಯನ್ನು ಮಂಡಳಿಯಿಂದ ಮಾಡಿರುವುದಿಲ್ಲ ಹಾಗೂ ನಿಮ್ಮ ವಸ್ತುಗಳು/ಸಾಮಾಗ್ರಿ/ನಗದುಗಳಿಗೆ ನೀವೇ ಜವಾಬ್ದಾರರು.
12. ಮಳಿಗೆದಾರರು ಕಡ್ಡಾಯವಾಗಿ ಜಿ.ಎಸ್.ಟಿ ನಂಬರ್ ಇರುವ ಬಿಲ್ಲುಗಳನ್ನು ವಿತರಿಸಬೇಕು. ಜಿ.ಎಸ್.ಟಿ ನಂಬರ್ ಹೊಂದಿಲ್ಲದವರು ತಾತ್ಕಾಲಿಕ ಜಿ.ಎಸ್.ಟಿ ನೋಂದಣಿ ಮಾಡಿಸಿ ಮಾರಾಟ ಮಾಡತಕ್ಕದ್ದು. ಸರ್ಕಾರದಿಂದ ವಿಧಿಸುವಂತೆ ತೆರಿಗೆಗಳನ್ನು ನಿಯಾಮಾನುಸಾರ ಪಾವತಿಸುವ ಜವಾಬ್ದಾರಿ ಮಳಿಗೆದಾರರದ್ದಾಗಿರುತ್ತದೆ.
13. ಆನ್‌ಲೈನ್ ಮೂಲಕ ನೊಂದಣಿ ಮಾಡಿದ ಮಾತ್ರಕ್ಕೆ ಮಳಿಗೆ ಹಂಚಿಕೆ ಕಡ್ಡಾಯವಾಗಿರುವುದಿಲ್ಲ.
14. ವಸ್ತುಪ್ರದರ್ಶನದಲ್ಲಿ ಭಾಗವಹಿಸುವ ಮಳಿಗೆದಾರರು ತಮ್ಮ ಮಳಿಗೆಗೆ ಸಂಬಂಧಪಟ್ಟ (4) ಜನರ ಭಾವಚಿತ್ರ, ಹೆಸರು ಹಾಗೂ ವಿಳಾಸವನ್ನು ಗುರುತಿನ ಚೀಟಿ ವಿತರಣೆಯ ಸಲುವಾಗಿ ಮಳಿಗೆ ಪಡೆಯುವ ಮುನ್ನ ಸಲ್ಲಿಸಬೇಕು.
15. ಒಂದಕ್ಕಿಂತ ಹೆಚ್ಚಿನ ಮಳಿಗೆಯನ್ನು ಕೇಳಿರುವ ಅರ್ಜಿದಾರರಿಗೆ, ಬಂದಿರುವ ಅರ್ಜಿಗಳನ್ನಾಧರಿಸಿ ಹಾಗೂ ವಸ್ತು ಪ್ರದರ್ಶನದ ಸ್ಥಳದಲ್ಲಿ ಮಳಿಗೆಗಳ ಲಭ್ಯತೆಯ ಮೇರೆಗೆ ಮಳಿಗೆಗಳನ್ನು ಹಂಚಿಕೆ ಮಾಡಲಾಗುವುದು.
16. ಮಳಿಗೆ ಹಂಚಿಕೆಯ ಅಂತಿಮ ತೀರ್ಮಾನ ಮತ್ತು ನಿರ್ಧಾರಗಳು ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಅಧಿಕಾರಗೊಳಿಸಿರುವ ಅಧಿಕಾರಿಗಳಿಗೆ ಇರುತ್ತದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಕರ್ನಾಟಕ ರಾಜ್ಯ ಖಾದಿ ಮತ್ತು
ಗ್ರಾಮೋದ್ಯೋಗ ಮಂಡಳಿ
ಬೆಂಗಳೂರು.

KARNATAKA STATE KHADI AND VILLAGE INDUSTRIES BOARD
(Unit of Government of Karnataka)
"Khadi Bhavan", No. 10, Jasma Bhavan Road, Bangalore - 560 052.
Ph. No. : 080-2226 6852, 2264 3445 Fax : 080-2264 3446
E-mail : kviboardbangkar@gmail.com

## Terms and Conditions

1. Sub lease of allotted stall is strictly prohibited.
2. To avoid any chance of fire accidents usage of kerosene/electric stove/ agarabatti and smoking inside exhibition area are strictly prohibited.
3. Consumption of alcohol, playing cards/gambling and other illegal activities are strictly prohibited.
4. All applicants shall remit Rs.500/- per stall towards Application Fee and Rs.35,400/- towards Rent per stall which includes GST.
5. Usage of plastic bags, covers are banned in Exhibition area
6. All activity shall be carried out as per prevailing rules acts/orders of circular/ order of the BBMP as well as state and central Government.
7. The stall holder shall adhere to the stipulated conditions, any violations of the conditions leads for forfeiture of stall rent paid apart from immediate eviction from Exhibition ground, and prohibiting them from participation in any government sponsored exhibition event for one year.
8. The stall holders should have e-payment equipment or card swipers in the stall on their own. The board will not provide any kind of e-payment equipment or card swipers.
9. Every stall holder shall submit the sales details in the prescribed format to the concerned officer by 10 a.m. on the succeeding day.
10. The stall holder shall pay the extra amount for the additional light, chairs, tables etc. if required.
11. The stall holder shall be responsible for their stocks/goods in the Exhibition. The board will not provide any boarding and lodging facilities.
12. Every stall holder should issue bill containing GST Registration number. If they don't have GST Registration, they have to obtain provisional GST Registration from the concerned authority and shall pay relevant taxes to the Government.
13. Mere filing application through online shall not create any rights for allotment of stall.
14. The participant applicants shall furnish photo's of their four attendants with their name, Identity and address, to issue IDENTITY CARDS. Before occupation of stall.
15. Number of Stalls allotment to the applicants who seek more than one stall depends on the number of applications received and the availability of stalls in Exhibition Site.
16. The CEO will be solo authority to allot/reject the stall and all powers are vested with him.

Chief Executive Officer
Karnataka State Khadi &
Village Industries Board
Bangalore